ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 48 ]
Total No. of Questions : 48 ]

**ಸಂಕೇತ ಸಂಖ್ಯೆ : 33-K**
**Code No. : 33-K**

**C**

**CCE PR**
**REVISED**

**Question Paper Serial No. 11**

# ವಿಷಯ : ದ್ವಿತೀಯ ಭಾಷೆ — ಕನ್ನಡ
# Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 24. 09. 2020 ] [ Date : 24. 09. 2020

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-30 A.M. to 1-30 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 48 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**



https://www.karnatakaboard.com/

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $5 \times 1 = 5$

1. 'ಸುವರ್ಣಾಕ್ಷರ' ಪದದಲ್ಲಿರುವ ಸಂಧಿ

   (ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ

   (ಸಿ) ವೃದ್ಧಿ ಸಂಧಿ (ಡಿ) ಯಣ್ ಸಂಧಿ

2. 'ಸಾರಂಗ' ಪದದ ಅರ್ಥ

   (ಎ) ವೈಭವ (ಬಿ) ಪಕ್ಷಿ

   (ಸಿ) ಚಂದಿರ (ಡಿ) ಜಿಂಕೆ

3. 'ಹೂಬ್ಜ ಹೊಸದು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ

   (ಎ) ಅನುಕರಣಾವ್ಯಯ (ಬಿ) ಜೋಡುನುಡಿ

   (ಸಿ) ದ್ವಿರುಕ್ತಿ (ಡಿ) ಸರ್ವನಾಮ

4. 'ರುಚಿಯನ್ನು' ಪದದಲ್ಲಿರುವ ವಿಭಕ್ತಿಯ ಹೆಸರು

   (ಎ) ಪ್ರಥಮ (ಬಿ) ದ್ವಿತೀಯಾ

   (ಸಿ) ತೃತೀಯಾ (ಡಿ) ಚತುರ್ಥಿ

5. 'ವಿಕಾಸ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ

   (ಎ) ಮೂರು (ಬಿ) ನಾಲ್ಕು

   (ಸಿ) ಐದು (ಡಿ) ಆರು

II. **ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

6. ಬೇಡನು ಏಕೆ ವಿಷ ಸವರಿದ ಬಾಣಗಳನ್ನು ಬಿಡುತ್ತಿದ್ದನು ?

7. ಪುಟ್ಟರಾಜರು ಖಾದಿ ಬಟ್ಟೆ ತೊಡುವ ಮೂಲಕ ಯಾವ ಆಂದೋಲನಕ್ಕೆ ಕೈಜೋಡಿಸಿದರು ?



https://www.karnatakaboard.com/

8. ಹಕ್ಕಿಗಳ ಗೂಡಿನಲ್ಲಿ ಯಾವುದರ ಸಮನ್ವಯತೆಯನ್ನು ಕಾಣಬಹುದು ?

9. ಗುರುಗಳು ತಿಳಿಸಿದಂತೆ ಕಾಫೀ ಮತ್ತು ಕಪ್ಪು ಯಾವುದರ ಪ್ರತೀಕಗಳಾಗಿವೆ ?

10. ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳ ಹೆಸರನ್ನು ತಿಳಿಸಿ.

11. ಥೇಮ್ಸ್ ನದಿ ದಡದಲ್ಲಿರುವ ಜನವಸತಿಯನ್ನು ಲೇಖಕರು ಯಾವುದಕ್ಕೆ ಹೋಲಿಸುತ್ತಾರೆ ?

12. ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಏಕೆ ಭಯಪಡುತ್ತಿದ್ದನು ?

13. ಏಣಿ ಜನರಿಗೆ ಮಾಡಿದ ಉಪಕಾರ ಯಾವುದು ?

14. ಏಣಿ ತಾನು ಯಾವುದಕ್ಕೆ ಕರಗುತ್ತೇನೆಂದು ಹೇಳುತ್ತದೆ ?

15. ಯುಗಾದಿ ಹಬ್ಬದಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ ?

16. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳಿದ್ದಾರೆ ?

17. ಜನಪದರು ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?

18. ಕೆರೆಗಳು ನಿಷ್ಪ್ರಯೋಜಕವಾಗುವುದು ಯಾವಾಗ ?

19. ಉತ್ತರನು ನಿಟ್ಟೋಟದಲಿ ಏಕೆ ಓಡಿದನು ?

III. **ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $12 \times 2 = 24$

20. ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು ?

21. ಪುಟ್ಟರಾಜ ಗವಾಯಿಗಳ ವೇಷಭೂಷಣಗಳು ಹೇಗಿದ್ದವು ?

22. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು ?

23. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟುತ್ತವೆ ?

24. ಗುರುಗಳು ಸುಖಜೀವನದ ಪಾಠವನ್ನು ವಿದ್ಯಾರ್ಥಿಗಳಿಗೆ ಹೇಗೆ ತಿಳಿಸಿದರು ?

25. ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತುಗಳಿಂದ ಎಳಿಸಿದಳು ?



https://www.karnatakaboard.com/

26. ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯು ನೀಡುವ ಉಪದೇಶವೇನು ?

27. ಕುಣಿಗಲ್ ಕೆರೆಯ ಸೊಬಗು ನೋಡುವವರಿಗೆ ಹೇಗೆ ಕಾಣುತ್ತಿತ್ತು ?

28. ಬಸವಣ್ಣನವರು ಜನರ ಮೌಢ್ಯತೆಯನ್ನು ಯಾವ ರೀತಿ ಖಂಡಿಸಿದ್ದಾರೆ ?

29. ಒಡಲು ಒಡೆವಂತೆ ಅರ್ಜುನನು ಮನದಲಿ ನಗಲು ಕಾರಣವೇನು ?

30. ಭೀಮನಾಯಕನು ವೈದ್ಯರ ವಸ್ತುಗಳನ್ನು ಏಕೆ ಹಿಂತಿರುಗಿಸಿದನು ?

31. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕೆಂದು ಕವಯಿತ್ರಿಯ ಆಶಯವಾಗಿದೆ ?

IV. **ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** $2 \times 3 = 6$

32. ಅ.ರಾ. ಮಿತ್ರ

33. ಸಿ.ಪಿ. ಕೃಷ್ಣಕುಮಾರ್

V. **ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ :** $1 \times 3 = 3$

34. ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು,
ದೀಪದೆದುರಿಗೆ ತಿಮಿರ ಸರಿಯುವಂತೆ
ಶಾಂತಿಯಲಿ ಬದುಕಿನೀ ಕರ್ತವ್ಯವನು ಮುಗಿಸು;
ಕೂಗಾಡಿ, ಹಾರಾಡಿ ಫಲವದೇನು ?

VI. **ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** $1 \times 3 = 3$

35. "ಮಿಂಚು ಹುಳು ದೀಪದಂತೆ ಬೆಳಗಿತು"

VII. **ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** $2 \times 3 = 6$

36. "ಕೈಕೆಸರಾದರೆ ಬಾಯಿ ಮೊಸರು"

**ಅಥವಾ**

"ಗಿಡವಾಗಿ ಬಗ್ಗದ್ದು; ಮರವಾಗಿ ಬಗ್ಗೀತೆ"



https://www.karnatakaboard.com/

37. "ಮಾತೇ ಮುತ್ತು; ಮಾತೇ ಮೃತ್ಯು"

***ಅಥವಾ***

"ಅತಿಯಾಸೆ ಗತಿಗೇಡು"

VIII. **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** $6 \times 3 = 18$

38. "ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ."

39. "ಅವನು ಬಂದರೆ ಕರೆದುಕೊಂಡು ಹೋಗು ತಾಯಿ."

40. "ಲಂಡನ್ ಮಲಗಿ ನಿದ್ರಿಸುತ್ತದೆಯೇ ಅನಿಸುತ್ತದೆ."

41. "ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು."

42. "ಚಿಲಿಪಿಲಿಯ ಕಲರವಕೆ ಮತ್ತೇರಿದೆ."

43. "ನಾಡನರಿಯವೊಲು ಹಲುಗಿರಿಯೆ ಬಿಡುವೆನೆ."

IX. **ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** $1 \times 4 = 4$

44. ಕೆಸರೊಳಿದ್ದರು ................................................

..............................................................

..............................................................

................................ ಮನುಜತೆಯ ಸಾರ್ಥಕತೆಗೆ.

***ಅಥವಾ***

ಒಂದು ಬಾಣಕೆ ...............................................

..............................................................

..............................................................

................................. ಹೋರಾಡು ಹಗಲಿರುಳು.

X. **ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $1 \times 4 = 4$

45. ಸಿದ್ಧಾರ್ಥನು ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕಂಡುಬಂದ ರೀತಿಯನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.

***ಅಥವಾ***

'ಬೋಧಿವೃಕ್ಷದ ಹಾಡು' ಪದ್ಯದಲ್ಲಿರುವ ಜೀವನ ಮೌಲ್ಯಗಳನ್ನು ಕವಿಯ ಆಶಯದಂತೆ ನಿಮ್ಮ ಮಾತುಗಳಲ್ಲಿ ಬರೆಯಿರಿ.



https://www.karnatakaboard.com/

XI. **ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

$1 \times 4 = 4 ( 2 + 2 )$

ನಾವು ಯಾವುದೇ ಕಾರ್ಯದಲ್ಲಿ ಯಶಸ್ಸು ಸಾಧಿಸುವುದಕ್ಕೆ ಮೂರು ಅಂಶಗಳು ಅತ್ಯಗತ್ಯ. ಅವುಗಳೆಂದರೆ ಸತತ ಅಭ್ಯಾಸ, ಇಂದ್ರಿಯ ನಿಗ್ರಹ, ಶ್ರದ್ಧೆ. ನಿರಂತರವಾದ ಅಭ್ಯಾಸದಿಂದ ಅರ್ಥವಾಗದೇ ಇರುವ ಕಷ್ಟಕರ ವಿಷಯವನ್ನಾದರೂ ಅರ್ಥಮಾಡಿಕೊಳ್ಳಬಹುದು. ನಿರಂತರ ಅಭ್ಯಾಸದಿಂದ ಅಸಾಧ್ಯವಾದುದನ್ನು ಸಾಧಿಸಬಹುದು. ಸತತ ಅಭ್ಯಾಸ ಮನಸ್ಸನ್ನು ಏಕಾಗ್ರಗೊಳಿಸಿ ಆ ವಿಷಯದ ಮೇಲೆ ಪ್ರಭುತ್ವವನ್ನು ಸಾಧಿಸುವಂತೆ ಮಾಡುತ್ತದೆ. ಇದು ನನ್ನಿಂದ ಸಾಧ್ಯ ಎಂಬ ಸಕಾರಾತ್ಮಕ ಮನೋಭಾವವನ್ನು ಮೂಡಿಸುತ್ತದೆ. ಒಂದೊಂದು ಇಂದ್ರಿಯಗಳು ಒಂದೊಂದು ಕಡೆ ಎಳೆಯುತ್ತಿದ್ದರೆ ಗುರಿಯನ್ನು ಮುಟ್ಟಲು ಸಾಧ್ಯವಾಗುವುದಿಲ್ಲ. ಇಂದ್ರಿಯಗಳ ಮೇಲೆ ಹತೋಟಿಯನ್ನು ಸಾಧಿಸಬೇಕು. ಇಂದ್ರಿಯ ನಿಗ್ರಹ ಯಶಸ್ಸನ್ನು ಸಾಧಿಸುವಲ್ಲಿ ಪ್ರಮುಖವಾದ ಮೆಟ್ಟಿಲಾಗಿದೆ. ನಮ್ಮ ಬಾಳಿನ ಸಾರ್ಥಕತೆಗೆ ಶುದ್ಧ ಮತ್ತು ಪ್ರಾಮಾಣಿಕ ಮನಸ್ಸು ಅತ್ಯಗತ್ಯ. ಅಂತಹ ಮನಸ್ಸಿನ ಪ್ರಪ್ರಥಮ ಗುಣವೇ ಪರಿಪೂರ್ಣ ಶ್ರದ್ಧೆ. ಇದು ನಮ್ಮ ಮನಸ್ಸು ನೈಜ ಮತ್ತು ಒಳಿತಿನ ಮೌಲ್ಯವನ್ನು ತಾನೇತಾನಾಗಿ ಸ್ವೀಕರಿಸುವಂತೆ ಮಾಡುತ್ತದೆ. ಶ್ರದ್ಧೆ ನಮ್ಮನ್ನು ಗುರಿಯತ್ತ ಮುನ್ನುಗ್ಗಲು ಉತ್ಸಾಹವನ್ನು ತುಂಬಿಸುವ ಶಕ್ತಿಯಾಗಿದೆ. ಪರಿಶ್ರಮ ಮತ್ತು ಪ್ರಾಮಾಣಿಕತೆಗಳೇ ಶ್ರದ್ಧೆಯ ಮೂಲಾಂಶಗಳು. ಶ್ರದ್ಧೆ ಒಂದು ಅಚಲವಾದ ಮತ್ತು ಕ್ರಿಯಾತ್ಮಕವಾದ ನಂಬಿಕೆ. ಇದು ನಮ್ಮನ್ನು ನಾವು ಕೈಗೊಂಡ ಕಾರ್ಯದಲ್ಲಿ ಮುನ್ನುಗ್ಗುವಂತೆ ಮಾಡುತ್ತದೆ. ಶ್ರದ್ಧೆ ಎಂದರೆ ಮನುಷ್ಯನ ಪ್ರಯೋಗಶೀಲವಾದ ಮನಸ್ಸು ಕೈಗೊಳ್ಳುವ ಸಾಹಸ ಎಂದು ತಿಳಿಯಬೇಕು. ಶ್ರದ್ಧೆಯುಳ್ಳವನಿಗೆ ಜ್ಞಾನವು ಲಭಿಸುತ್ತದೆ. ಶ್ರದ್ಧೆ ಜ್ಞಾನವನ್ನು ಸಮರ್ಥವಾಗಿ ಸ್ವೀಕರಿಸುವ ಪರಿಶುದ್ಧ ಮನಃಪಕ್ವತೆಯನ್ನು ನಮ್ಮಲ್ಲಿ ಉಂಟುಮಾಡುತ್ತದೆ. ಶ್ರದ್ಧೆಯಿಲ್ಲದೆ ಕಲಿತ ಕಲಿಕೆ ಜ್ಞಾನವಾಗದು. ಶೈಕ್ಷಣಿಕ ಪರೀಕ್ಷೆಯಲ್ಲಾಗಲೀ ಜೀವನದ ಪರೀಕ್ಷೆಯಲ್ಲಾಗಲೀ ಸಂಪೂರ್ಣ ಯಶಸ್ಸನ್ನು ಗಳಿಸುವುದಕ್ಕೆ ಪರಿಪೂರ್ಣ ಶ್ರದ್ಧೆ ಇರಬೇಕು. ನಾವು ಶ್ರದ್ಧೆಯಿಂದ ಕೆಲಸ ಮಾಡಬೇಕೇ ಹೊರತು ಸ್ಪರ್ಧೆಯಿಂದ ಅಲ್ಲ, ಶ್ರದ್ಧೆಯಿಂದ ಮಾಡಿದ ಕೆಲಸಕಾರ್ಯಗಳು ಯಶಸ್ವಿಯಾಗುತ್ತವೆ ಜೊತೆಗೆ ನಮಗೆ ಸಂತೃಪ್ತಿಯನ್ನು ನೀಡುತ್ತವೆ.

46. *ಪ್ರಶ್ನೆಗಳು :*

ಅ) ಯಶಸ್ಸಿನ ನಿಜವಾದ ಮೆಟ್ಟಲುಗಳಾವುವು ?

ಬ) ಶ್ರದ್ಧೆಯುಳ್ಳವನಿಗೆ ಜ್ಞಾನವು ಹೇಗೆ ಲಭಿಸುತ್ತದೆ ?



https://www.karnatakaboard.com/

XII. **ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

47. ಸಾವಯವ ಕೃಷಿ

*ಅಥವಾ*

ವೃತ್ತಪತ್ರಿಕೆಗಳು

XIII. **ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :** $1 \times 5 = 5$

48. ನಿಮ್ಮನ್ನು ಬೀದರಿನ ಸರ್ಕಾರಿ ಪ್ರೌಢಶಾಲೆಯ 'ಶ್ರೀಗೌರಿ' ಎಂದು ಭಾವಿಸಿಕೊಂಡು, ನಿಮ್ಮ ಪರೀಕ್ಷಾ ತಯಾರಿಯನ್ನು ವಿವರಿಸಿ ಉಡುಪಿಯ ರಥಬೀದಿಯಲ್ಲಿ ವಾಸವಾಗಿರುವ 'ಗಂಗಾಧರ' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ.

*ಅಥವಾ*

ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ 'ಮುತಾಹಿರ್' ಎಂದು ಭಾವಿಸಿಕೊಂಡು, ಶಾಲೆಯ ಗ್ರಂಥಾಲಯಕ್ಕೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪುಸ್ತಕಗಳನ್ನು ತರಿಸಿಕೊಡುವಂತೆ ಕೋರಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಿಗೆ ಮನವಿ ಪತ್ರವನ್ನು ಬರೆಯಿರಿ.



https://www.karnatakaboard.com/

https://www.karnatakaboard.com/